# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-5403/2013/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 31/01/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ನಾಗರಾಜ್ ಎಸ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರಾಗಿಮಸಲವಾಡ ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, (2) ಶ್ರೀ.ಶೇಖರಗೌಡ, ಅಧ್ಯಕ್ಷರು, ರಾಗಿಮಸಲವಾಡ ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, (3) ಶ್ರೀ.ಬಸಪ್ಪ, ಹಿಂದಿನ ಬಿಲ್ ಕಲೆಕ್ಟರ್, ರಾಗಿಮಸಲವಾಡ ಗ್ರಾಮ ಪಂಚಾಯಿತಿ, (ಹಾಲಿ ಕಾರ್ಯದರ್ಶಿ, ಕತ್ತಲಗೆರೆ ಗ್ರಾಮಪಂಚಾಯಿತಿ, ಚನ್ನಗಿರಿ ತಾಲ್ಲೂಕು), ಮತ್ತು (4) ಶ್ರೀ.ಬಿ.ಆಂಜಿನಪ್ಪ, ಹಿಂದಿನ ಬಿಲ್ ಕಲೆಕ್ಟರ್, ರಾಗಿಮಸಲವಾಡ ಗ್ರಾಮ ಪಂಚಾಯಿತಿ, (ಹಾಲಿ ಕಾರ್ಯದರ್ಶಿ, ಎಲೆಹೊಳೆ ಗ್ರಾಮಪಂಚಾಯಿತಿ, ಚನ್ನಗಿರಿ ತಾಲ್ಲೂಕು), ದಾವಣಗೆರೆ ಜಿಲ್ಲೆ, – ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಎಸ್.ಆರ್.ಚಿಕ್ಕನಗೌಡ ಬಿನ್ ರಾಜಶೇಖರಪ್ಪ, ರಾಗಿಮಸಲವಾಡ ಗ್ರಾಮ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ.ನಾಗರಾಜ್ ಎಸ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರಾಗಿಮಸಲವಾಡ ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, (2) ಶ್ರೀ.ಶೇಖರಗೌಡ, ಅಧ್ಯಕ್ಷರು, ರಾಗಿಮಸಲವಾಡ ಗ್ರಾಮ ಪಂಚಾಯಿತಿ, ಹರಪನಹಳ್ಳಿ ತಾಲ್ಲೂಕು, (3) ಶ್ರೀ.ಬಸಪ್ಪ, ಹಿಂದಿನ ಬಿಲ್ ಕಲೆಕ್ಟರ್, ರಾಗಿಮಸಲವಾಡ ಗ್ರಾಮ ಪಂಚಾಯಿತಿ, (ಹಾಲಿ ಕಾರ್ಯದರ್ಶಿ, ಕತ್ತಲಗೆರೆ ಗ್ರಾಮಪಂಚಾಯಿತಿ, ಚನ್ನಗಿರಿ ತಾಲ್ಲೂಕು), ಮತ್ತು (4) ಶ್ರೀ.ಬಿ.ಆಂಜಿನಪ್ಪ, ಹಿಂದಿನ ಬಿಲ್ ಕಲೆಕ್ಟರ್, ರಾಗಿಮಸಲವಾಡ ಗ್ರಾಮ ಪಂಚಾಯಿತಿ, (ಹಾಲಿ ಕಾರ್ಯದರ್ಶಿ, ಎಲೆಹೊಳೆ ಗ್ರಾಮಪಂಚಾಯಿತಿ, ಚನ್ನಗಿರಿ ತಾಲ್ಲೂಕು), ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ರಾಗಿಮಸಲವಾಡ ಗ್ರಾಮದ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 2009-10ನೇ ಸಾಲಿನಲ್ಲಿ ಎನ್.ಆರ್.ಇ.ಜಿ.ಎ.

ಯೋಜನೆಯಡಿ ಅಕ್ರಮ ನಡೆದಿರುತ್ತದೆ. ಗ್ರಾಮಪಂಚಾಯಿತಿ ಪಿ.ಡಿ.ಓ. ಶ್ರೀ ನಾಗರಾಜ್, ಗ್ರಾಮಪಂಚಾಯಿತಿ ಕಾರ್ಯದರ್ಶಿಯವರು 2009-10ನೇ ಸಾಲಿನಲ್ಲಿ ಹಸಿರು ಹೊನ್ನು ಯೋಜನೆಯಡಿಯಲ್ಲಿ ಒಟ್ಟು 16 ಲಕ್ಷ ರೂಪಾಯಿಗಳ ಸಸಿಗಳನ್ನು ಪಂಚಿದಂತೆ ತೋರಿಸಿ ಅವ್ಯವಹಾರ ಮಾಡಿರುತ್ತಾರೆ. ಇಂದಿರಾ ಆವಾಜ್ ಯೋಜನೆ ಮನೆಗಳನ್ನು ನಿರಾಶ್ರಿತರಲ್ಲದ ಫಲಾನುಭವಿಗಳಿಗೆ ಮಂಜೂರು ಮಾಡಿ ಅವ್ಯವಹಾರ ಮಾಡಿರುತ್ತಾರೆ. ಕೂಲಿಗಾಗಿ ಕಾಳು ಯೋಜನೆಯ ಬರ ಪರಿಹಾರ ಕಾಮಗಾರಿಯಲ್ಲಿ ಅವ್ಯವಹಾರ ಮಾಡಿ ಯಂತ್ರಗಳ ಶಕ್ತಿಯಿಂದ ಕಾಮಗಾರಿಯಗಳನ್ನು ಮಾಡಿಸಿರುತ್ತಾರೆ. ಇಲಾಖಾ ಭ್ರಷ್ಟಾಚಾರದಿಂದ ಸರ್ಕಾರದ ಯೋಜನೆಯಗಳು ದುರ್ಬಳಕೆಯಾಗಿರುತ್ತವೆ ಮತ್ತು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿರುತ್ತದೆ ಎಂದು ಆರೋಪಿಸಿ ದೂರುದಾರರು ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ದಾವಣಗೆರೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು ವರದಿಯನ್ನು ಸಲ್ಲಿಸಿದ್ದು, ತಮ್ಮ ವರದಿಯಲ್ಲಿ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ತನಿಖೆಯನ್ನು ನಡೆಸಿದ್ದು, ಅವರ ತನಿಖಾ ವರದಿಯನ್ನು ಪರಿಶೀಲಿಸಲಾಗಿ 2009 ರಿಂದ 2011ನೇ ಸಾಲಿನವರೆಗೆ ನಡೆದ ಸಾಮಾಜಿಕ ಅರಣ್ಯೀಕರಣ ಕಾಮಗಾರಿಯಲ್ಲಿ ಪ್ರತಿಶತ 5 ರಷ್ಟು ಮಾತ್ರ ಅನುಷ್ಠಾನವಾಗಿದ್ದು, ಕಾಮಗಾರಿಗೆ ತಗಲಿ ಉಳಿದ ವೆಚ್ಚವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ.ನಾಗರಾಜ ಹಾಗೂ ಶ್ರೀ.ಶೇಖರಗೌಡ ಬಿನ್ ಹನುಮಗೌಡ, ಗ್ರಾಮಪಂಚಾಯಿತಿ ಅಧ್ಯಕ್ಷರು ಇವರ ನಿರ್ಲಕ್ಷ್ಯದಿಂದ ಸರ್ಕಾರದ ಹಣ ದುರ್ಬಳಕೆಯಾಗಿರುವುದು ಕಂಡುಬಂದಿರುವುದಾಗಿ ವಿಚಾರಣಾಧಿಕಾರಿಗಳು ತಿಳಿಸಿರುತ್ತಾರೆ. ಅಲ್ಲದೆ ಪ್ರವಾಹ ಪೀಡಿತ ಸಂತ್ರಸ್ಥರಿಗೆ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಒಟ್ಟು 20 ಮನೆಗಳನ್ನು ಕಟ್ಟುವ ಸಲುವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತಾರೆ. ಪ್ರತಿಯೊಂದು ಮನೆಗೆ ರೂ.40,000/- ಗಳ ಅನುದಾನವನ್ನು ನೀಡಿದ್ದು, ಅದರಲ್ಲಿ 8 ಮನೆಗಳನ್ನು ಫಲಾನುಭವಿಗಳು ಕಟ್ಟಿಕೊಳ್ಳದಿದ್ದರೂ ಅವರು ಮನೆಯನ್ನು ಕಟ್ಟಿಕೊಂಡಿರುತ್ತಾರೆಂದು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ಸಹಾಯ ಧನ ರೂ.3,20,000/- ಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ನಾಗರಾಜ್, ಅಧ್ಯಕ್ಷರಾದ, ಶೇಖರಗೌಡ, ಬಿಲ್ ಕಲೆಕ್ಟರ್ ಬಸಪ್ಪ ಮತ್ತು ಜಿ.ಆಂಜಿನಪ್ಪ ತಂದೆ ಹನುಮಪ್ಪ ಇವರು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೆ ಸದರಿಯವರು ಹಣ ದುರ್ಬಳಕೆ ಮಾಡಿ ಕರ್ತವ್ಯಲೋಪ ಎಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆಯೆಂದು ತಿಳಿಸಿರುತ್ತಾರೆ.

4) ತನಿಖಾಧಿಕಾರಿಯ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ 1 ರಿಂದ 4ನೇ ಎದುರುದಾರರಿಗೆ ಆದೇಶಿಸಲಾಗಿತ್ತು. 1 ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತನಿಖಾ ವರದಿಯನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ತಮ್ಮ ಆಕ್ಷೇಪಣೆಗಳಲ್ಲಿ ತನಿಖಾಧಿಕಾರಿ ವಿಚಾರಿಸಿರುವ ಸಾಕ್ಷಿಗಳು ಸುಳ್ಳು ಹೇಳಿಕೆಗಳನ್ನು ನೀಡಿರುತ್ತಾರೆ. ಅವರು ದೂರುದಾರರ ದೂರಿನ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೇರ ಸಾಕ್ಷಿಗಳಾಗಿರುವುದಿಲ್ಲ. ತನಿಖಾಧಿಕಾರಿ ವಿಚಾರಿಸಿರುವ ಸಾಕ್ಷಿಗಳು ನರೇಗಾ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿರುವುದಿಲ್ಲ. ನರೇಗಾ ಯೋಜನೆಯಡಿ

ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಫಲಾನುಭವಿಗಳಿಗೆ ಸಸಿಗಳನ್ನು ವಿತರಿಸಲಾಗಿದೆ. ಆದರೆ, ಫಲಾನುಭವಿಗಳು ಸಸಿ ನೆಟ್ಟು ಸೂಕ್ತ ರೀತಿಯಲ್ಲಿ ಆರೈಕೆ ಮಾಡದೇ ಸಸಿಗಳನ್ನು ಸಂರಕ್ಷಿಸಿರುವುದಿಲ್ಲ. ಆದ್ದರಿಂದ, ಆ ಬಗ್ಗೆ ಎದುರುದಾರರು ಜವಾಬ್ದಾರರಲ್ಲ. ಸರ್ಕಾರಿ ಯೋಜನೆಯಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಅರಣ್ಯಾಧಿಕಾರಿಗಳು ತಪಾಸಣೆ ನಡೆಸಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿಯನ್ನು ನೀಡಿದ್ದು. ಆ ವರದಿಯ ಆಧಾರದಲ್ಲಿ ಹಣವನ್ನು ವಿತರಿಸಲಾಗಿದೆ. ವೈಯಕ್ತಿಕ ದ್ವೇಷದಿಂದ ದೂರುದಾರರು ಈ ದೂರನ್ನು ನೀಡಿರುವುದಾಗಿದೆಯೆಂದು ತಿಳಿಸಿರುತ್ತಾರೆ.

5) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, 2009 ರಿಂದ 2011ನೇ ಸಾಲಿನವರೆಗೆ ನಡೆದ ಸಾಮಾಜಿಕ ಅರಣ್ಯೀಕರಣ ಕಾಮಗಾರಿಯಲ್ಲಿ ಶೇ.5 ರಷ್ಟು ಮಾತ್ರ ಅನುಷ್ಠಾನವಾಗಿದ್ದು, ಕಾಮಗಾರಿಗೆ ತಗಲಿ ಉಳಿದ ಹಣವನ್ನು 1 ಮತ್ತು 2ನೇ ಎದುರುದಾರರು ದುರ್ಬಳಕೆ ಮಾಡಿರುವುದು ಹಾಗೂ ಪ್ರವಾಹ ಪೀಡಿತ ಸಂತ್ರಸ್ಥರಿಗೆ ಮನೆಗಳನ್ನು ಕಟ್ಟಿಕೊಡುವ ಕಾಮಗಾರಿಗಳಿಗೆ ಒಟ್ಟು ರೂ.3,20,000/- ಹಣವನ್ನು 1 ರಿಂದ 4ನೇ ಎದುರುದಾರರು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆ ಬಗ್ಗೆ ತನಿಖಾಧಿಕಾರಿ ದಾಖಲಿಸಿರುವ ಹೇಳಿಕೆಗಳನ್ನು ಹಾಗೂ ಕೆಲವು ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ. ತನಿಖಾಧಿಕಾರಿ ವರದಿಯಲ್ಲಿ ಹೇಳಿರುವ ಸದರಿ ಅಂಶಗಳನ್ನು ಅಲ್ಲಗಳೆಯಲು ಎದುರುದಾರರು ಯಾವುದೇ ಸೂಕ್ತವಾದ ಸಮಜಾಯಿಷಿಯನ್ನು ನೀಡಿರುವುದಿಲ್ಲ ಮತ್ತು ಸಾಕ್ಷ್ಯಾಧಾರಗಳನ್ನು ಒದಗಿಸಿರುವುದಿಲ್ಲ. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಎದುರುದಾರರ ವಿರುದ್ಧ ಮಾಡಿರುವ ಆಪಾದನೆಗಳು ಸಾಬೀತಾಗಿರುವುದು ಕಂಡುಬರುತ್ತದೆ.

6) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ 1 ರಿಂದ 4ನೇ ಎದುರುದಾರರು ದುರುಪಯೋಗಪಡಿಸಿಕೊಂಡಿರುವ ಹಣವನ್ನು ವಸೂಲಿ ಮಾಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

31-1-17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.